ಸಣ್ ಸುದ್ದಿ

ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ತೋರಿದ ವಿವೇಕಾನಂದ ಕಾಲೇಜು

ತುರುವೇಕೆರೆ: ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಇಲ್ಲಿಯ ಶ್ರೀ ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಪ್ರದರ್ಶನ ತೋರಿ ಹೆಚ್ಚು ಪ್ರಶಸ್ತಿಗಳನ್ನು ಗಳಿಸಿದ್ದಾರೆ. ಮಾಯಸಂದ್ರದ ಕ್ರೀಡಾಂಗಣದಲ್ಲಿ ನಡೆದ ಬಾಲಕರ ವಿಭಾಗದಲ್ಲಿ ಕಬ್ಬಡ್ಡಿ, ಷಟಲ್‌ನಲ್ಲಿ ಪ್ರಥಮ ಸ್ಥಾನ, ವಾಲಿಬಾಲ್, ಥ್ರೋ ಬಾಲ್, ಖೋಖೋ, ಹ್ಯಾಂಡ್ ಬಾಲ್‌ನಲ್ಲಿ ದ್ವಿತೀಯ ಸ್ಥಾನಗಳಿಸಿದ್ದಾರೆ. ಬಾಲಕ ಅಥ್ಲೆಟಿಕ್ ವಿಭಾಗದಲ್ಲಿ ಗುಂಡು ಎಸೆತ, ಚಕ್ರ ಎಸೆತದಲ್ಲಿ ಪ್ರಥಮ ಸ್ಥಾನಗಳಿಸಿದ್ದಾರೆ. ರಿಲೆಯಲ್ಲಿ ದ್ವಿತೀಯ ಸ್ಥಾನಗಳಿಸಿದ್ದಾರೆ. ಬಾಲಕಿಯರ ವಿಭಾಗದಲ್ಲಿ ಕಬ್ಬಡ್ಡಿ, ಷಟಲ್ ಮತ್ತು ಚೆಸ್ ನಲ್ಲಿ ಪ್ರಥಮ ಸ್ಥಾನ, ವಾಲಿಬಾಲ್‌ನಲ್ಲಿ ದ್ವಿತೀಯ ಸ್ಥಾನ, ಅಥ್ಲೆಟಿಕ್ ವಿಭಾಗದಲ್ಲಿ ಗುಂಡು ಎಸೆತ, ಸುತ್ತಿಗೆ ಎಸೆತದಲ್ಲಿ ದ್ವಿತೀಯ ಸ್ಥಾನ, 3000 ಮೀಟರ್ ನಡಿಗೆ ಮತ್ತು 3000 ಮೀಟರ್ ಓಟದಲ್ಲಿ ತೃತೀಯ ಸ್ಥಾನ ಪಡೆದುಕೊಂಡರು. ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜಿಗೆ ಸಮಗ್ರ ಪ್ರಶಸ್ತಿಯೂ ಇದರೊಂದಿಗೆ ಲಭಿಸಿದೆ. ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿರುವ ವಿದ್ಯಾರ್ಥಿಗಳನ್ನು ಕಾಲೇಜಿನ ಪ್ರಾಂಶುಪಾಲರಾದ ಬಿ.ಶಿವಮೂರ್ತಿ, ಸಂಸ್ಥೆಯ ನೋಡಲ್ ಅಧಿಕಾರಿಗಳಾದ ಪ್ರಕಾಶ್, ಕಾಲೇಜಿನ ದೈಹಿಕ ಶಿಕ್ಷಣ ಉಪನ್ಯಾಸಕರು, ಕ್ರೀಡಾ ಕಾರ್ಯದರ್ಶಿಗಳು, ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗ ಅಭಿನಂದಿಸಿದ್ದಾರೆ.

ಉಚಿತವಾಗಿ ನಡೆಸುವ ಆರೋಗ್ಯ ಶಿಬಿರದ ಉದಾಸೀನ ಬೇಡ: ಕೃಷ್ಣಪ್ಪ

ತುರುವೇಕೆರೆ: ಸಂಘ ಸಂಸ್ಥೆಗಳು ಸೇವಾ ಮನೋಭಾವದಿಂದ ಉಚಿತವಾಗಿ ನಡೆಸುವ ಆರೋಗ್ಯ ಶಿಬಿರಗಳ ಬಗ್ಗೆ ಯಾವುದೇ ಉದಾಸೀನ ಮಾಡದೆ ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಮಾಜಿ ಶಾಸಕ ಎಂ.ಟಿ.ಕೃಷ್ಣಪ್ಪ ತಿಳಿಸಿದರು. ಪಟ್ಟಣದ ಪಟ್ಟಣ ಪಂಚಾಯ್ತಿ ಆವರಣದಲ್ಲಿ ಜಯಕರ್ನಾಟಕ ಜನಪರ ವೇದಿಕೆ, ಕುವೆಂಪು ಸಮಗ್ರ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಪಟ್ಟಣ ಪಂಚಾಯಿತಿ, ರೋಟರಿ ಹಾಗೂ ಇನ್ನರ್‌ವೀಲ್ ಕ್ಲಬ್, ಸಪ್ತಗಿರಿ ವೈದ್ಯಕೀಯ ಹಾಸ್ಪಿಟಲ್ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘಗಳ ಸಹಯೋಗದಲ್ಲಿ ನಡೆಸಿದ ಉಚಿತ ಹೃದ್ರೋಗ ತಪಾಸಣೆ ಶಸ್ತ್ರಚಿಕಿತ್ಸೆ ಹಾಗೂ ಮಧುಮೇಹ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಸಾಹಿತಿ ತುರುವೇಕೆರೆ ಪ್ರಸಾದ್ ಮಾತನಾಡಿ, ಗ್ರಾಮಾಂತರ ಪ್ರದೇಶದಲ್ಲಿ ಇಂತಹ ಆರೋಗ್ಯ ಶಿಬಿರಗಳು ಅಗತ್ಯವಾಗಿವೆ. ಅನೇಕ ಕಾಯಿಲೆಗಳ ತಪಾಸಣೆಯನ್ನು ತಜ್ಞ ವೈದ್ಯರು ತಪಾಸಣೆ ಮಾಡಿ ಉತ್ತಮ ಸಲಹೆ ಸೂಚನೆ ನೀಡಲಿದ್ದಾರೆ. ಹಾಗಾಗಿ ಸಾರ್ವಜನಿಕರು ಪ್ರಯೋಜನ ಪಡೆದುಕೊಳ್ಳುವಂತೆ ಮನವಿ ಮಾಡಿದರು. ಜಯಕರ್ನಾಟಕ ಜನಪರ ವೇದಿಕೆ ತಾಲೂಕು ಅಧ್ಯಕ್ಷ ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಪಟ್ಟಣ ಪಂಚಾಯ್ತಿ ಅಧ್ಯಕ್ಷೆ ಆಶಾರಾಜಶೇಖರ್, ಸದಸ್ಯರಾದ ಸ್ವಪ್ನನಟೇಶ್, ಮಧು, ಎಐಸಿಸಿ ಸದಸ್ಯ ಸುಬ್ರಹ್ಮಣಿ ಶ್ರೀಕಂಠೇಗೌಡ, ಪತ್ರಕರ್ತರ ಸಂಘದ ಅಧ್ಯಕ್ಷ ಮಲ್ಲಿಕಾರ್ಜುನ ದುಂಡ, ರೋಟರಿ ಅಧ್ಯಕ್ಷ ಕೆ.ಸಿ.ಜಯರಾಮ್, ಇನ್ನರ್‌ವೀಲ್ ಅಧ್ಯಕ್ಷೆ ಗೀತಾಸುರೇಶ್, ಖಜಾಂಚಿ ನೇತ್ರಸಿದ್ದಲಿಂಗ ಸ್ವಾಮಿ, ಜ್ಯೋತಿ, ಸಿಐಟಿಯು ಸತೀಶ್, ಬಸವಣ್ಣ, ಆಟೋಚಾಲಕರ ಸಂಘದ ಅಧ್ಯಕ್ಷ ಗಂಗಣ್ಣ, ಧನು, ಸೇರಿದಂತೆ ಅನೇಕ ಗಣ್ಯರು ಹಾಗೂ ವೈದ್ಯರು ಪಾಲ್ಗೊಂಡಿದ್ದರು.

ರಮೇಶ್‌ಗೆ ಪಿಎಚ್‌ಡಿ

ತುಮಕೂರು: ತುಮಕೂರಿನ ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ ರಮೇಶ್ ಎಂ. ಅವರು ಡಾ. ಕೋದಂಡರಾಮ ಅವರ ಮಾರ್ಗದರ್ಶನದಲ್ಲಿ ಮಂಡಿಸಿದ ಪ್ರಬಂಧಕ್ಕೆ ಬೆಂಗಳೂರು ವಿವಿಯಿಂದ ಪಿಎಚ್‌ಡಿ ಪದವಿ ಲಭಿಸಿದೆ.

ತುರುವೇಕೆರೆ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ ಕ್ರೀಡಾಕೂಟದಲ್ಲಿ ಇಲ್ಲಿಯ ಶ್ರೀ ಸ್ವಾಮಿ ವಿವೇಕಾನಂದ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಅತ್ಯುತ್ತಮ ಪ್ರದರ್ಶನ ತೋರಿ ಹೆಚ್ಚು ಪ್ರಶಸ್ತಿ ಗಳಿಸಿದ್ದಾರೆ. ಕಾಲೇಜಿನ ಸಿಬ್ಬಂದಿ ವಿದ್ಯಾರ್ಥಿಗಳನ್ನು ಅಭಿನಂದಿಸಿದರು.

ತುರುವೇಕೆರೆಯಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಮಾಜಿ ಶಾಸಕ ಎಂ.ಟಿ.ಕೃಷ್ಣಪ್ಪ ಉದ್ಘಾಟಿಸಿದರು. ಈ ವೇಳೆ ಪಟ್ಟಣ ಪಂಚಾಯ್ತಿ ಅಧ್ಯಕ್ಷೆ ಆಶಾರಾಜಶೇಖರ್, ಸದಸ್ಯರಾದ ಸ್ವಪ್ನನಟೇಶ್, ಮಧು, ಎಐಸಿಸಿ ಸದಸ್ಯ ಸುಬ್ರಹ್ಮಣಿ ಶ್ರೀಕಂಠೇಗೌಡ ಇದ್ದರು.

ಶಿರಾ ತಾಲೂಕಿನ ಹನುಮನಹಳ್ಳಿ ಗ್ರಾಮದ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಯೋಜನೆಯಡಿ ಸುಮಾರು 90 ಲಕ್ಷ ವೆಚ್ಚದಲ್ಲಿ ಸಿ.ಸಿ ಹಾಗೂ ಚರಂಡಿ ಕಾಮಗಾರಿಗೆ ಶಾಸಕ ರಾಜೇಶ್ ಗೌಡ ಭೂಮಿ ಪೂಜೆ ನೆರವೇರಿಸಿದರು. ನರಸಿಂಹಮೂರ್ತಿ, ಲಕ್ಷ್ಮಣ್, ಭೋಜರಾಜ ಇತರರಿದ್ದರು.

ಶೇ.89ರಷ್ಟು ಸಾಕ್ಷರರಿಂದಲೇ ಆತ್ಮಹತ್ಯೆಗೆ ಪ್ರಯತ್ನ

ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮದಲ್ಲಿ ನೂರುನ್ನಿಸ | ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿ: ಡಾ. ಲೋಕೇಶ್

- **ಕನ್ನಡಪ್ರಭ ವಾರ್ತೆ** ತುಮಕೂರು

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಶೇ.89ರಷ್ಟು ಮಂದಿ ಸಾಕ್ಷರರೇ ಆತ್ಮಹತ್ಯೆಗೆ ಪ್ರಯತ್ನ ಪಡುತ್ತಿರುವುದು ಕಳವಳಕಾರಿ ಸಂಗತಿ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ನೂರುನ್ನಿಸ ತಿಳಿಸಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿಗಳ ಕಚೇರಿಯ ಮಾಸಿಕ ಆರೋಗ್ಯ ವಿಭಾಗ, ಸ್ನೇಹ ಮನೋವಿಕಾಸ ಕೇಂದ್ರ, ಅಚರ್ಡ್ ಮದ್ಯವರ್ಜನ ಮತ್ತು ಸಮಗ್ರ ಪುನರ್ವಸತಿ ಕೇಂದ್ರದ ಸಹಯೋಗದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ವಿಶ್ವ ಆತ್ಮಹತ್ಯೆ ತಡೆಗಟ್ಟುವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ನ್ಯಾ.ನೂರುನ್ನಿಸ ಮಾತನಾಡಿದರು.

ಸ್ನೇಹ ಮನೋವಿಕಾಸ ಕೇಂದ್ರದ ಮನೋವೈದ್ಯ ಡಾ. ಲೋಕೇಶ್‌ಬಾಬು ಮಾತನಾಡಿ, ಮನುಷ್ಯನಾಗಿ ಹುಟ್ಟಿದ ಮೇಲೆ ಒಂದು ಬಾರಿಯಾದರೂ ಆತ್ಮಹತ್ಯೆ ವಿಚಾರ ಬಂದು ಹೋಗುತ್ತದೆ. ಅತಿಯಾದ ನಿರೀಕ್ಷೆಗಳು ಆತ್ಮಹತ್ಯೆಗೆ ಪ್ರಮುಖ ಕಾರಣ. ಗಂಡ-ಹೆಂಡತಿ, ಪೋಷಕರು-ಮಕ್ಕಳು, ಪರಸ್ಪರ ನೋವನ್ನು ಹಂಚಿಕೊಳ್ಳಬೇಕು. ಕುಟುಂಬದಲ್ಲಿ ಅನ್ಯೋನ್ಯತೆ ಇದ್ದಲ್ಲಿ ಆತ್ಮಹತ್ಯೆ ಆಲೋಚನೆ ಬಾರದಂತೆ ತಡೆಯಬಹುದು. ಕೆಲವು ಪ್ರಕರಣಗಳಲ್ಲಿ ಮಾನಸಿಕ, ಕೌಟುಂಬಿಕ, ಆರ್ಥಿಕ ಕಾರಣಗಳಿಲ್ಲದಿದ್ದರೂ ಎಚ್‌ಐವಿ, ಕ್ಯಾನ್ಸರ್‌ಗಳಂತಹ ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವವರು ಆತ್ಮಹತ್ಯೆಗೆ ಯತ್ನಿಸುವ ಸಾಧ್ಯತೆಯಿರುತ್ತದೆ. ಇಂತಹವರಿಗೆ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಬೇಕೆಂದು ಸಲಹೆ ನೀಡಿದರು.

ಅಚರ್ಡ್ ಸಂಸ್ಥೆಯ ನಿರ್ವಾಹಕ ನಿರ್ದೇಶಕ ಡಾ. ಎಚ್.ಜಿ. ಸದಾಶಿವಯ್ಯ ಮಾತನಾಡಿ, ಆತ್ಮಹತ್ಯೆಯು ಸಮಾಜಕ್ಕೆ ದೊಡ್ಡ ಸಮಸ್ಯೆಯಾಗಿ ಕಾಡುತ್ತಿದೆ. ಮಾದಕ/ಮದ್ಯ ವ್ಯಸನಿಗಳು ಹೆಚ್ಚಾಗಿ ಆತ್ಮಹತ್ಯೆಗೊಳಗಾಗುತ್ತಾರೆ. ನೆಮ್ಮದಿ ಕೊರತೆ, ಜೀವನದಲ್ಲಿ ಜಿಗುಪ್ಸೆ, ಒಂಟಿತನ, ಮತ್ತಿತರ ಕಾರಣಗಳಿಂದ ಬದುಕಿನಲ್ಲಿ ಭರವಸೆ ಕಳೆದುಕೊಂಡಿರುತ್ತಾರೆ. ಇಂಥವರಿಗೆ ಸೂಕ್ತ ಸಮಾಲೋಚನೆ ಮಾಡುವುದರಿಂದ ಅವರಲ್ಲಿರುವ ಆತ್ಮಹತ್ಯೆ ಯೋಚನೆಯನ್ನು ದೂರ ಮಾಡಬಹುದೆಂದು ತಿಳಿಸಿದರು.

ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮ ವಿಭಾಗದ ಮನೋವೈದ್ಯ ಡಾ. ಸರ್ವೇಶ್‌ಕುಮಾರ್ ಮಾತನಾಡಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಡಿ.ಎಂ. ಮಂಜುನಾಥ್ ಅವಿಭಕ್ತ ಕುಟುಂಬಗಳು ವಿರಳವಾಗಿರುವುದರಿಂದಲೂ ಆತ್ಮಹತ್ಯೆಗಳ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ ಎಂದರು.

ಜಿಲ್ಲಾ ಕುಷ್ಠರೋಗ ನಿರ್ಮೂಲನಾಧಿಕಾರಿ ಹಾಗೂ ಮಾನಸಿಕ ರೋಗ ನಿವಾರಣಾಧಿಕಾರಿ ಡಾ. ಶ್ರೀದೇವಿ ಚಂದ್ರಿಕಾ ಎಂ., ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ವಿರೂಪಾಕ್ಷಪ್ಪ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ರಾಜಣ್ಣ, ಆಶಾಕಾರ್ಯಕರ್ತೆಯರು, ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

> **ಬಹುತೇಕ ಗಂಡ-ಹೆಂಡತಿ ನಡುವೆ ವೈಮನಸ್ಯ, ನಿರುದ್ಯೋಗ, ಜೀವನದಲ್ಲಿ ಅತೃಪ್ತಿ, ಪರೀಕ್ಷೆ ಫಲಿತಾಂಶ ನಪಾಸು, ವಿಚ್ಛೇದನ, ವಿವಾಹೇತರ ಸಂಬಂಧ, ಪ್ರೇಮ ವೈಫಲ್ಯ, ಅತಿಯಾದ ನಿರೀಕ್ಷೆ ಮತ್ತಿತರ ಸಮಸ್ಯೆಗಳಿಂದ ಒತ್ತಡಕ್ಕೊಳಗಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ.**
>
> - **ನೂರುನ್ನಿಸ** ನ್ಯಾಯಾಧೀಶರು

ವಚನಗಳು ಸಿದ್ಧಾಂತ ಸಾಹಿತ್ಯವಲ್ಲ

ಮನುಷ್ಯನ ದೌರ್ಬಲ್ಯಗಳು ವ್ಯಕ್ತಿಯ ವಿಕಾಸಕ್ಕೆ ಮಾರಕ: ಸಿದ್ಧಲಿಂಗಪ್ಪ

ತುಮಕೂರಿನ ಜಯದೇವ ವಿದ್ಯಾರ್ಥಿನಿಲಯದ ಸಭಾಂಗಣದಲ್ಲಿ ಬಸವಕೇಂದ್ರ ಏರ್ಪಡಿಸಿದ್ದ ವಚನ ಶ್ರಾವಣ ಕಾರ್ಯಕ್ರಮದಲ್ಲಿ ಜಿಲ್ಲಾ ಕಸಾಪ ಅಧ್ಯಕ್ಷ ಕೆ.ಎಸ್.ಸಿದ್ದಲಿಂಗಪ್ಪ ಮಾತನಾಡಿದರು.

- **ಕನ್ನಡಪ್ರಭ ವಾರ್ತೆ** ತುಮಕೂರು

ವಚನಗಳು ಅಲ್ಲಮಪ್ರಭುವಿನ ನೇತೃತ್ವದಲ್ಲಿ ಅನುಭವ ಮಂಟಪದ ಚರ್ಚಾಗೋಷ್ಠಿಯಲ್ಲಿ ಸಾಮೂಹಿಕವಾಗಿ ಹೊರಹೊಮ್ಮಿದ ರಚನೆಗಳು. ಅವುಗಳು ಯಾವುದೇ ಏಕವ್ಯಕ್ತಿಯಿಂದ ನಿರ್ಮಿತವಾದ ಸಿದ್ಧಾಂತ ರಚನೆಗಳಾಗಿರದೆ ಅನುಭಾವಿಕ ರಚನೆಗಳಾಗಿವೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಕೆ.ಎಸ್. ಸಿದ್ಧಲಿಂಗಪ್ಪ ಅಭಿಪ್ರಾಯಪಟ್ಟರು.

ತುಮಕೂರಿನ ಜಯದೇವ ಹಾಸ್ಟೆಲ್‌ನ ಬಸವಕೇಂದ್ರದ ವತಿಯಿಂದ ಏರ್ಪಡಿಸಿದ್ದ ಶರಣ ಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದರು. ವ್ಯಕ್ತಿ ಪರಿಸ್ಥಿತಿಗೆ ದಾಸನಾಗಿ ಸುಖವೆಂಬ ಮಾಯೆಯ ಬೆನ್ನುಹತ್ತಿ ಅರಿಷಡ್ವರ್ಗಗಳಿಗೆ ಬಲಿಯಾಗಿ ದುರ್ಬಲನಾಗುತ್ತಾ ಹೋಗುತ್ತಾನೆ. ವಿಕಸನದ ಪ್ರಕ್ರಿಯೆಯಲ್ಲಿ ನಮ್ಮ ದೋಷ ದೌರ್ಬಲ್ಯಗಳನ್ನು ನಾವು ಗುರ್ತಿಸಿಕೊಂಡು ಅವುಗಳಿಂದ ನಿಧಾನವಾಗಿ ದೂರ ಸರಿದು ಸಬಲವಾಗಬೇಕು. ದೌರ್ಬಲ್ಯಗಳು ವ್ಯಕ್ತಿಯ ವಿಕಾಸಕ್ಕೆ ಮಾರಕ. ಇವುಗಳ ನಿವಾರಣೆಗೆ ಸತತ ಪ್ರಯತ್ನ ಮಾಡಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಡಾ. ಡಿ.ಎನ್.ಯೋಗೀಶ್ವರಪ್ಪ, ಲಕ್ಷಕ್ಕೊಬ್ಬ ಭಕ್ತ ಕೋಟಿಗೊಬ್ಬ ಶರಣ ಎಂಬ ವಚನದ ಸಾಲನ್ನು ಇಟ್ಟುಕೊಂಡು ಮಾತನಾಡಿದ ಅವರು ಸಮಾಜದಲ್ಲಿ ಭಕ್ತ ಸಿಗಬಹುದು ಶರಣ ಸಿಗುವುದು ಕಷ್ಟ. ಭಕ್ತ ವ್ಯಕ್ತಿವಾದಿ, ಆತ ಆತ್ಮೋದ್ಧಾರ ಮಾಡಿಕೊಳ್ಳುವ ಹಂತಕ್ಕೆ ಸೀಮಿತವಾಗುತ್ತಾನೆ. ಆದರೆ ಶರಣ ಆತ್ಮೋದ್ಧಾರದ ಜೊತೆಗೆ ಸಮಾಜೋದ್ಧಾರವನ್ನು ಮಾಡುವವನು ಎಂದರು.

ವಚನ ಸಾಹಿತ್ಯ ಚಿಂತಕ ಗುರುನಾಥಪ್ಪ ಬೂದಿಹಾಳ್‌ರನ್ನು ಸನ್ಮಾನಿಸಲಾಯಿತು. ಬಸವಕೇಂದ್ರದ ಅಧ್ಯಕ್ಷರಾದ ಸಿದ್ಧಗಂಗಮ್ಮ ಬಿ. ಸಿದ್ಧರಾಮಣ್ಣ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಶಸಾಪ ಅಧ್ಯಕ್ಷ ಎಂ.ಜಿ. ಸಿದ್ಧರಾಮಯ್ಯ, ತುಮಕೂರು ತಾಲೂಕು ಕಸಾಪ ಅಧ್ಯಕ್ಷ ಚಿಕ್ಕಬೆಳ್ಳಾವಿ ಶಿವಕುಮಾರ್, ಜಯದೇವ ವಿದ್ಯಾರ್ಥಿ ನಿಲಯ ಟ್ರಸ್ಟ್‌ನ ಕಾರ್ಯದರ್ಶಿ ರಾಮಕೃಷ್ಣಪ್ಪ, ಕೋಶಾಧ್ಯಕ್ಷ ಡಿ.ಬಿ.ಶಿವಾನಂದ, ಪ್ರಾಧ್ಯಾಪಕ ಡಾ. ಗೋವಿಂದರಾಯ, ಡಾ. ಬಸವರಾಜ, ಡಾ. ಬಿ.ನಂಜುಂಡಸ್ವಾಮಿ, ಕೆ.ಎಸ್. ಉಮಾಮಹೇಶ್, ಕಲ್ಪನಾ, ಕಾರ್ಯಕ್ರಮದ ಪ್ರಾಯೋಜಕರಾದ ಕಮಲಮ್ಮ ಉಪಸ್ಥಿತರಿದ್ದರು. ಬಸವಕೇಂದ್ರದ ಕಾರ್ಯದರ್ಶಿ ಚಂದ್ರಶೇಖರ್ ಸ್ವಾಗತಿಸಿದರು, ಮಹಿಳಾ ಬಸವ ಕೇಂದ್ರದ ಭವಾನಮ್ಮ ವಂದಿಸಿದರು.

ಪ್ರಜಾಪ್ರಭುತ್ವದ ಮೇಲೆ ಜನರಿಗೆ ನಂಬಿಕೆ

ಸ್ವಾತಂತ್ರ್ಯ ಹೋರಾಟಗಾರರ ಸಂಸ್ಮರಣೆ,ಸಹಸ್ರ ಧ್ವಜ ವಂದನಾ ಕಾರ್ಯಕ್ರಮದಲ್ಲಿ ಸುರೇಶ್

- **ಕನ್ನಡಪ್ರಭ ವಾರ್ತೆ** ತುಮಕೂರು

ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಪ್ರಬಲವಾದ ನಂಬಿಕೆಯನ್ನು ಹೊಂದಿದ್ದ ತುಮಕೂರಿನ ಜನ ರಾಜ ಪ್ರಭುತ್ವದ ವಿರುದ್ಧ ಹೋರಾಟವನ್ನು ನಡೆಸುವ ಮೂಲಕ ಮೂರು ಜನ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರ ಗುಂಡಿಗೆ ಬಲಿಯಾದದ್ದು ಇತಿಹಾಸ ಎಂದು ಡಾ. ಎಚ್. ಎಸ್. ಸುರೇಶ್ ತಿಳಿಸಿದರು.

ಸ್ವಾತಂತ್ರ್ಯ ಚಳವಳಿಗಾಗಿ ಹೋರಾಡಿ ಪ್ರಾಣ ತ್ಯಾಗ ಮಾಡಿದ ಮಹನೀಯರನ್ನು ಗೌರವಿಸುವ ಸಲುವಾಗಿ ನಗರದ ಸ್ವಾತಂತ್ರ್ಯ ಚೌಕದಿಂದ ಸರ್ಕಾರಿ ಪದವಿಪೂರ್ವ ಕಾಲೇಜು ಆವರಣದಲ್ಲಿರುವ ಗಾಂಧೀ ಸ್ಮಾರಕ ಭವನದವರೆಗೆ ಹಮ್ಮಿಕೊಂಡಿದ್ದ ಪಾದಯಾತ್ರೆಗೆ ಸ್ವಾತಂತ್ರ್ಯ ಚೌಕದಲ್ಲಿ ವೀರಸೇನಾನಿಗಳಾದ ಗೊರೂರು ರಾಮಸ್ವಾಮಿ ಅಯ್ಯಂಗಾರರ ಪುತ್ರ ರಾಮಚಂದ್ರ, ಗಂಗಪ್ಪ, ನಂಜುಂಡಪ್ಪ ಸ್ತೂಪಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆಗೆ ಚಾಲನೆ ನೀಡಿದರು.

ಎಂ. ಬಸವಯ್ಯ ಮಾತನಾಡಿ, ಮೈಸೂರಿನ ಚರಿತ್ರೆಯಲ್ಲಿ 1947ರ ಸೆ.14 ಅತ್ಯಂತ ವಿಷಾದಪೂರ್ವಕ ದಿನವಾಗಿದೆ. ಆ ದಿನ ಮೈಸೂರು ರಾಜ್ಯದ ಅನೇಕ ಮಂದಿ ನಿರಪರಾಧಿಗಳು ಮಡಿದರು. ಆ ಸಮಯದಲ್ಲಿ ದಿವಾನರು ಪ್ರಜೆಗಳನ್ನು ಮಹಾರಾಜರ ಬಳಿಗೆ ಬಿಡದೆ ಸರ್ವಾಧಿಕಾರಿಯಾಗಿ ವರ್ತಿಸಿ ಮಹಾರಾಜರಿಗೆ ಪ್ರಜೆಗಳ ವಿಷಯದಲ್ಲಿ ಅವಿಶ್ವಾಸ ಹುಟ್ಟುವಂತೆ ಮಾಡಿದರು. ಆ ಕರಾಳ ದಿನ ತುಮಕೂರು ಸಹ ರಕ್ತದ ಮಡುವಿನಲ್ಲಿ ತೊಯ್ದು ಹೋಯಿತು. ಅಂದು ನಡೆದ ಮಹಾ ಸತ್ಯಾಗ್ರಹ ಸಮರದಲ್ಲಿ ಮುಖ್ಯವಾಗಿ ಹೈಸ್ಕೂಲ್ ಮತ್ತು ಕಾಲೇಜು ವಿದ್ಯಾರ್ಥಿಗಳು ಎಂದರೆ ತಪ್ಪಾಗಲಾರದು. ತುಮಕೂರಿನ ಸ್ವಾತಂತ್ರ್ಯ ಚೌಕದಲ್ಲಿ ನಡೆದ ಪ್ರಚಂಡ ಸತ್ಯಾಗ್ರಹ. ಸ್ವಾತಂತ್ರ್ಯ ವೀರರ ಆ ಬೃಹತ್ ಪ್ರಮಾಣದ ಚಳವಳಿಗೆ ಆಳರಸರ ಅಳ್ಳದೆ ತಲ್ಲಣಿಸಿತು. ಸರ್ಕಾರದ ವಿರುದ್ಧ ಘೋಷಣೆ ಮೊಳಗಿದವು ಎಂದರು.

ಸರ್ವೋದಯ ಮಂಡಲದ ಜಿಲ್ಲಾಧ್ಯಕ್ಷ ಆರ್.ವಿ. ಪುಟ್ಟಕಾಮಣ್ಣ ಮಾತನಾಡಿ, ತುಮಕೂರಿನ ಮಂಡಿಪೇಟೆಯಲ್ಲಿ ಸ್ವಾತಂತ್ರ್ಯ ಹೋರಾಟಗಾರರ ನೆನಪಿಗಾಗಿ ನಿರ್ಮಿಸಲಾಗಿರುವ ವೀರಸೌಧವನ್ನು ತುಮಕೂರು ಜಿಲ್ಲೆಯ ಜನತೆಗೆ ಇತಿಹಾಸವನ್ನು ತಿಳಿಸುವ ಸಲುವಾಗಿ ಸ್ವಾತಂತ್ರ್ಯ ಹೋರಾಟದ ವಸ್ತು ಸಂಗ್ರಹಾಲಯವನ್ನಾಗಿ ಮಾಡುವ ಮೂಲಕ ತುಮಕೂರಿನ ಇತಿಹಾಸವನ್ನು ತಿಳಿಸುವ ಕೆಲಸವನ್ನು ಜಿಲ್ಲಾಡಳಿತ ಮಾಡಬೇಕು. ಸ್ವಾತಂತ್ರ್ಯ ಹೋರಾಟದ ಸಂಘಟನೆಗಾಗಿ ತುಮಕೂರಿಗೆ ಆಗಮಿಸಿದ್ದ ವೇಳೆ ಸರ್ಕಾರಿ ಜೂನಿಯರ್ ಕಾಲೇಜಿನ ಕೊಠಡಿಯೊಂದರಲ್ಲಿ ಉಳಿದುಕೊಂಡಿದ್ದ ಕೊಠಡಿಯನ್ನು ಗಾಂಧೀ ಸ್ಮಾರಕವನ್ನಾಗಿ ಅಭಿವೃದ್ಧಿ ಪಡಿಸಬೇಕು ಎಂದು ಆಗ್ರಹಿಸಿದರು.

ಕಾರ್ಯಕ್ರದಲ್ಲಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್. ರೇವಣ್ಣ, ಡಿಡಿಪಿಐ ನಂಜಯ್ಯ, ನೀಕೆತ್ ರಾಜ್‌ಮೌರ್ಯ, ದವನಂ ಆಮರನಾಥ್, ಡಿಸಿ ಎಲ್.ಎನ್. ಗುಪ್ತ, ಸರ್ವೋದಯ ಮಂಡಲದ ಯಾಚಿ ದೊಡ್ಡಯ್ಯ, ಸಿ.ಡಿ. ಚಂದ್ರಶೇಖರ್, ಉಗಮ ಶ್ರೀನಿವಾಸ್, ಸಿ. ಪಾಂಡುರಂಗ, ಉಮೇಶ್, ಲೋಕೇಶ್, ಕೃಷ್ಣಮೂರ್ತಿ, ಕಾಂತಣ್ಣ ಎಸ್.ಕೆ, ನಗರಪಾಲಿಕೆ ಸದಸ್ಯರಾದ ಗಿರಿಜಾ ಧನಿಯಾಕುಮಾರ್, ಶಿಕ್ಷಕರು ಉಪಸ್ಥಿತರಿದ್ದರು.

ಅಪರಿಚಿತ ಶವ ಪತ್ತೆ

ತುಮಕೂರು: ನಗರ ಪೊಲೀಸ್ ಠಾಣೆ ವ್ಯಾಪ್ತಿ ಜಿಲ್ಲಾಸ್ಪತ್ರೆ ಮುಂಭಾಗ ಸಾರ್ವಜನಿಕರ ತಂಗುದಾಣದಲ್ಲಿ ಸೆಪ್ಟೆಂಬರ್ 13ರ ಬೆಳಿಗ್ಗೆ 9.15ರ ಸಮಯದಲ್ಲಿ ಸುಮಾರು 35 ರಿಂದ 40 ವರ್ಷದ ಅಪರಿಚಿತ ವ್ಯಕ್ತಿಯ ಶವ ಪತ್ತೆಯಾಗಿದ್ದು, ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೃತ ವ್ಯಕ್ತಿಯು 165 ಸೆಂ.ಮೀ. ಎತ್ತರ, ಎಣ್ಣೆಗೆಂಪು ಮೈಬಣ್ಣ, ದುಂಡು ಮುಖ, ದೃಢಕಾಯ ಶರೀರ ಹೊಂದಿದ್ದು, ಮೃತನ ಮೈಮೇಲೆ ಕಾಫಿ ಬಣ್ಣದ ತುಂಬು ತೋಳಿನ ರೆಡಿಮೇಡ್ ಷರ್ಟ್, ಕೇಸರಿ ಬಣ್ಣದ ಲುಂಗಿ, ಕಾಫಿ ಬಣ್ಣದ ರೆಡಿಮೇಡ್ ನಿಕ್ಕರ್ ಇರುತ್ತದೆ. ಈತನ ವಾರಸುದಾರರಿದ್ದಲ್ಲಿ ದೂ.ವಾ.ಸಂ. 0816-2278388 ಅಥವಾ ಮೊ.ಸಂ. 9480802945/30/00ಯನ್ನು ಸಂಪರ್ಕಿಬಹುದೆಂದು ಸಬ್‌ಇನ್ಸ್‌ಪೆಕ್ಟರ್ ಮನವಿ ಮಾಡಿದ್ದಾರೆ.

ಇಂದು, ನಾಳೆ ವಿದ್ಯುತ್ ವ್ಯತ್ಯಯ

ತುಮಕೂರು: ಶಿರಾ ನಗರ ಉಪವಿಭಾಗ ವ್ಯಾಪ್ತಿಯಲ್ಲಿ ತ್ರೈಮಾಸಿಕ ನಿರ್ವಹಣಾ ಕಾಮಗಾರಿಯನ್ನು ನಿರ್ವಹಿಸುತ್ತಿರುವುದರಿಂದ ಸೆಪ್ಟೆಂಬರ್ 15ರಂದು ಶಿರಾ ನಗರ, ಯಲಿಯೂರು, ಮದಲೂರು, ಬಂದಕುಂಟೆ ಮತ್ತು ಕೊಟ್ಟ ಪಂಚಾಯ್ತಿ ಹಾಗೂ ಸೆ.16ರಂದು ಮಾಗೋಡು, ರತ್ನಸಂದ್ರ, ಹೊ. ಗೊ.ಹಳ್ಳಿ, ಯಲಿಯೂರು ಪಂಚಾಯ್ತಿಯ ಸುತ್ತ ಮುತ್ತಲ ಗ್ರಾಮಗಳಲ್ಲಿ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಚ್.ಈ. ಶಾಂತರಾಜು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

PUBLIC NOTICE

The General Public is hereby informed that, my client - **Sri SHASHWATH .N** S/o. Nagaraja C, aged 30 years, R/at No. 1446/1, 23rd Cross, 9th main, B-Block, Sahakaranagar, Bengaluru-560092, intend to purchase the below shown Schedule Property under a Registered Sale deed from - **1. Sri VASANTHRAJ P,** S/o S V Purushotham, aged 34 years, R/at No. 11/36, 8th Cross, Bhovi Palya, Mahalakshmipuram, Pipeline Road, Bangalore - 560086 & **2. Sri L. ARJUN,** S/o Lakshman Venkobrao, aged 33 years, R/at No. 8, 16th 'B' Main, Near Samhitha School, Kurubarahalli, JC Nagar, Mahalakshmipuram, Bangalore-560086.

If anybody has got any share, right, title interest & claim over the Schedule Property either in part or full may kindly contact the under signed with relevant documents within **7 days** failing which my client will proceed for further transaction.

SCHEDULE

ALL THAT PIECE AND PARCEL of immovable agriculture landed property to the extent of 3 Acres 37 Guntas (excluding 3 Guntas Karab) of Sy No. 107, situated at Hosahalli Village, Kodigenahalli Hobli, Madhugiri Taluk, Tumkur District, which is bounded on **East by:** Property of Shivashankar, **West by:** Property of Narasimhaiah, **North by:** Govt. Road, **South by:** Govt. Property.

PRASAD D KAGWAD, Advocate
KAGWAD & KAGWAD
Advocates & Legal Consultants,
No. 18, Above HDFC ATM, Kodigehalli Main Road, Sanjeevininagar,
Sahakaranagar Post, Bangalore-92.
Mob: 97396 27478 Date: 14-09-2022

ICICI Home Finance

ಕಾರ್ಪೊರೇಟ್ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ ಐಸಿಐಸಿಐ ಎಚ್‌ಎಫ್‌ಸಿ ಟವರ್, ಅಂಧೇರಿ - ಕುರ್ಲಾ ರಸ್ತೆ, ಅಂಧೇರಿ (ಪೂರ್ವ), ಮುಂಬೈ - 400059, ಇಂಡಿಯಾ

ಶಾಖಾ ಕಛೇರಿ: ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್, 1ನೇ ಮಹಡಿ, ಸಂ. 165 ಅಂಡ್ 166, ಮಂಜುನಾಥ ಚೇಂಬರ್ಸ್, ಶಂಕರ್ ನಗರ್ ಮುಖ್ಯರಸ್ತೆ, ಮಹಾಲಕ್ಷ್ಮೀಪುರಂ ಬೆಂಗಳೂರು-560096.

[ನಿಯಮ 8(6)ಕ್ಕೆ ಪ್ರೊವಿಸೊಗಳನ್ನು ನೋಡಿರಿ]

ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಸೂಚನೆ

2002ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ನಿಯಮ 8(6)ಕ್ಕೆ ಪ್ರಾವಿಸೋಗಳ ಜೊತೆ ಓದಿಕೊಳ್ಳಬೇಕಾದ 2002ರ ಹಣಕಾಸು ಆಸ್ತಿಗಳ ಭದ್ರತೆ ಮತ್ತು ಪುನರ್ ನಿರ್ಮಾಣ ಹಾಗೂ ಹಿತಾಸಕ್ತಿ ಜಾರಿ ಕಾಯಿದೆಯಡಿ ಸ್ಥಿರ ಆಸ್ತಿ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಸೂಚನೆ.

ಸಾಲಗಾರ(ರಿ)ನಿಗೆ ಮತ್ತು ಜಾಮೀನುದಾರ(ರಿ)ನಿಗೆ ನಿರ್ದಿಷ್ಟವಾಗಿ ಹಾಗೂ ಸಾರ್ವಜನಿಕವಾಗಿ ವಿಸ್ತಾರವಾಗಿ ಸೂಚನೆ ನೀಡುವುದೇನೆಂದರೆ ಭದ್ರತಾ ಸಾಲಗಾರರು ಬ್ಯಾಂಕಿಗೆ ಸ್ವಾಧೀನಕ್ಕಾಗಿ ಅಡಮಾನಿತ/ಸುಪರ್ದಿಗೆ ನೀಡಿರುವ ಕೆಳಕಂಡಂತೆ ವಿವರಿಸಲಾದ ಆಸ್ತಿಗಳನ್ನು ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿ., ಬ್ಯಾಂಕ್‌ನ ಅಧಿಕೃತ ಅಧಿಕಾರಿಗಳು **ಭೌತಿಕ** ಸ್ವಾಧೀನಪಡಿಸಿಕೊಂಡಿದ್ದು ಇವುಗಳನ್ನು ''ಎಲ್ಲಿ ಹೇಗಿದೆಯೋ ಹಾಗೆಯೇ'' ''ಎಲ್ಲಿ ಏನಿದೆಯೋ ಹಾಗೆಯೇ'' ಮತ್ತು ''ಎಲ್ಲಿ ಏನೇನಿದೆಯೋ'' ಆಧಾರದಲ್ಲಿ ಮಾರಾಟ ಮಾಡಲಿದ್ದಾರೆ. ಸಂಕ್ಷಿಪ್ತ ವಿವರಣೆಗಳನ್ನು ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಸಾಲಗಾರನ(ರು)ಗಳ/ ಸಹ ಸಾಲಗಾರನ(ರ)/ ಜಾಮೀನುದಾರನ(ರ)ಹೆಸರು ಕಾನೂನು ಉತ್ತರಾಧಿಕಾರಿಗಳು ಸಾಲದ ಖಾತಾ ಸಂ.	ಭದ್ರತಾ ಆಸ್ತಿಯ ವಿವರಗಳು ತಿಳಿದಿರುವ ಋಣ ಬಾಧ್ಯತೆಗಳೊಂದಿಗೆ ಏನಾದರೂ ಇದ್ದಲ್ಲಿ	ಬಾಕಿಯಾಗಿರುವ ಮೊತ್ತ	ಮೀಸಲು ಬೆಲೆ ಅರ್ನೆಸ್ಟ್ ಮನಿ ಡಿಪಾಸಿಟ್	ಆಸ್ತಿಯ ಪರಿಶೀಲಿಸ ಬಹುದಾದ ದಿನಾಂಕ ಮತ್ತು ಸಮಯ	ಹರಾಜಿನ ದಿನಾಂಕ ಮತ್ತು ಸಮಯ
(ಎ)	(ಬಿ)	(ಸಿ)	(ಡಿ)	(ಇ)	(ಎಫ್)	(ಜಿ)
1.	ಬಿಬಿ ರಾಜಣ್ಣ (ಸಾಲಗಾರರು) ಪ್ರೇಮಲತಾ (ಸಹ- ಸಾಲಗಾರರು) ಸಾಲದ ಖಾತಾ ಸಂ. NHTUM00001266039	ನಿವೇಶನ ಸಂ.15, ಸರ್ವೆ ಸಂ. 41/3, ವಾರ್ಡ್ ಸಂ.29, ಪಿಐಡಿ ಸಂ. 65959, ಮರಳೂರು ಸರಸ್ವತಿಪುರಂ ಬಡಾವಣೆ, ತುಮಕೂರು- 572103.	Rs. 38,45,581/- 09th Sept, 2022	Rs. 3,350,000/- Rs. 3,35,000	23rd Sept, 2022 11:00 AM 03:00 PM	30th Sept, 2022 02:00 PM 03:00 PM
2.	ರಾಕೇಶ್ ಟಿ ವಿ (ಸಾಲಗಾರರು) ಟಿ ಎನ್ ವೆಂಕಟೇಶ್ (ಸಹ-ಸಾಲಗಾರರು) ಖಾತಾ ಸಂಖ್ಯೆ NHTUM00001266932	ನಿವೇಶನ ಸಂ.28, ಸರ್ವೆ ಸಂ. 28, ಖಾತಾ ಸಂ.1070/28, ಪಿಐಡಿ ಸಂ. 59802, ಅಂತರಾಸನಹಳ್ಳಿ ಬಡಾವಣೆ, ತುಮಕೂರು-5720105.	Rs. 32,95,684/- 09th Sept, 2022	Rs. 27,21,600/- Rs. 2,72,160/-	23rd Sept, 2022 11:00 AM 03:00 PM	30th Sept, 2022 02:00 PM 03:00 PM
3.	ರಶ್ಮಿ ಜೋಷಿ (ಸಾಲಗಾರರು) ಖಾತಾ ಸಂಖ್ಯೆ NHTUM00000836068	ನಿವೇಶನ ಸಂ.8, ಮತ್ತು 9, ಮುನಿಸಿಪಲ್ ಖಾತಾ ಸಂ. 6295, ಪಿಐಡಿ ಸಂ. 92628, ಬಟವಾಡಿ ಬಡಾವಣೆ, ವಾರ್ಡ್ ಸಂ. 35, ಆನಂದನಗರ, ತುಮಕೂರು ಟೌನ್-572103.	Rs. 66,14,638/- 09th Sept, 2022	Rs. 60,23,810/- Rs. 6,02,381/-	23rd Sept, 2022 11:00 AM 03:00 PM	30th Sept, 2022 02:00 PM 03:00 PM

ಮೇಲೆ ವಿವರಿಸಲಾದ ಭದ್ರತಾ ಆಸ್ತಿಗಳ ಹರಾಜು ಮಾರಾಟವು ಹರಾಜಿನ ಏಜೆನ್ಸಿಯವರಾದ ಆ್ಯಕ್ಷನ್ ಟೈಗರ್ ಮೂಲಕ **(URL Link-https://BestAuctionDeal.com)** ಎಂಬುದರ ಮೇಲೆ ನಡೆಯುತ್ತದೆ. ಅಡಮಾನದಾರರಿಗೆ/ ನೋಟೀಸರವರಿಗೆ ಅವರ ಒಟ್ಟು ಬಾಕಿ ಸಾಲ ಮತ್ತು ತದನಂತರದ ಬಡ್ಡಿಯನ್ನು ಹರಾಜಿನ ದಿನಾಂಕ **29ನೇ ಸೆಪ್ಟೆಂಬರ್, 2022ರ ಸಾಯಂಕಾಲ 05.00ರೊಳಗಾಗಿ** ಮರುಪಾವತಿ ಮಾಡಲು ಕೊನೆಯ ಅವಕಾಶ ನೀಡಲಾಗಿದೆ ಇಲ್ಲವಾದಲ್ಲಿ ಈ ಭದ್ರತಾ ಆಸ್ತಿಯನ್ನು(ಗಳನ್ನು) ಕಾರ್ಯಸೂಚಿಯಂತೆ ಮಾರಾಟ ಮಾಡಲಾಗುತ್ತದೆ.

ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ಗೆ ಭಾವಿ ಬಿಡ್‌ದಾರ(ರು) ಮೇಲೆ ತಿಳಿಸಿದ ಅರ್ನೆಸ್ಟ್ ಹಣ ಠೇವಣಿ (ಇಎಂಡಿ) ಡಿಮಾಂಡ್ ಡ್ರಾಫ್ಟ್ (ಡಿಡಿ)(ಕಾಲಂ ಸಂಖ್ಯೆ ಇ ರಲ್ಲಿ ನಮೂದಿಸಿದಂತೆ)ಯೊಂದಿಗೆ ಸಲ್ಲಿಸಬೇಕು. ಐಸಿಐಸಿಐ **ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ 1ನೇ ಮಹಡಿ, ಸಂ. 165 ಅಂಡ್ 166, ಮಂಜುನಾಥ ಚೇಂಬರ್ಸ್, ಶಂಕರ್ ನಗರ್ ಮುಖ್ಯರಸ್ತೆ, ಮಹಾಲಕ್ಷ್ಮೀಪುರಂ ಬೆಂಗಳೂರು-560096ಗೆ 29ನೇ ಸೆಪ್ಟೆಂಬರ್, 2022ರಂದು ಅಥವಾ ಅದಕ್ಕೂ ಮೊದಲು ಸಂಜೆ 04:00ಕ್ಕಿಂತ ಮೊದಲು,** ದಯವಿಟ್ಟು ಗಮನಿಸಿ, ಒಂದು ವೇಳೆ ನಿರೀಕ್ಷಿತ ಬಿಡ್‌ದಾರರು(ಗಳು) ಮೇಲೆ ತಿಳಿಸಿದ ಸಮಯದ ಪ್ರಕಾರ ತಮ್ಮ ಪ್ರಸ್ತಾಪವನ್ನು ಸಲ್ಲಿಸಲು ಸಾಧ್ಯವಾಗದಿದ್ದರೆ ನಂತರ ಪ್ರತಿಗೆ ಸಹಿ ಮಾಡಿ ಟೆಂಡರ್ ದಾಖಲೆಗಳನ್ನು **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್‌ಗೆ** ಸಲ್ಲಿಸುವುದು, **ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್ 1ನೇ ಮಹಡಿ, ಸಂ. 165 ಅಂಡ್ 166, ಮಂಜುನಾಥ ಚೇಂಬರ್ಸ್, ಶಂಕರ್ ನಗರ್ ಮುಖ್ಯರಸ್ತೆ, ಮಹಾಲಕ್ಷ್ಮೀಪುರಂ ಬೆಂಗಳೂರು-560096ಗೆ 29ನೇ ಸೆಪ್ಟೆಂಬರ್, 2022ರಂದು ಅಥವಾ ಸಂಜೆ 05:00 ಕ್ಕೆ ಮೊದಲು ಸಲ್ಲಿಸಬಹುದು.** ಇಎಂಡಿಗಾಗಿನ ಅರ್ನೆಸ್ಟ್ ಮನಿ ಡೆಪಾಸಿಟ್ (ಡಿಡಿ) ಯಾವುದೇ ರಾಷ್ಟ್ರೀಕೃತ/ ಷೆಡ್ಯೂಲ್ ಬ್ಯಾಂಕಿನಿಂದ ''**ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್-ಹರಾಜು**''- ಯಶವಂತಪುರರವರ ಪದನಾಮಕ್ಕೆ ಪಾವತಿಯಾಗುವಂತಿರಬೇಕು.

ಪರಿಶೀಲನೆ, ಹರಾಜಿನ ಷರತ್ತು ಮತ್ತು ನಿಬಂಧನೆಗಳು ಅಥವಾ ಟೆಂಡರ್ ಸಲ್ಲಿಕೆಗಾಗಿನ ಇತರೆ ಯಾವುದೇ ಸ್ಪಷ್ಟನೆಗಳಿಗಾಗಿ ದಯವಿಟ್ಟು ಐಸಿಐಸಿಐ **ಹೋಮ್ ಫೈನಾನ್ಸ್** ಕಂಪನಿ ಲಿಮಿಟೆಡ್‌ನ ಮೊಬೈಲ್ **ಸಂ.7021072869.** ಅಥವಾ ನಮ್ಮ ಮಾರಾಟ ಮತ್ತು ಮಾರುಕಟ್ಟೆ ಪಾಲುದಾರ ನೆಕ್ಸನ್ ಸೊಲ್ಯೂಷನ್ ಪ್ರವೇಟ್ ಲಿಮಿಟೆಡ್ ಅನ್ನು ಸಂಪರ್ಕಿಸುವುದು

ಅಧಿಕೃತ ಅಧಿಕಾರಿಯು ಯಾವುದೇ ಬಿಡ್‌ಗಳನ್ನು ಯಾವುದೇ ಅಥವಾ ಎಲ್ಲ ಬಿಡ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸಬಹುದಾದ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತಾರೆ.

ಮಾರಾಟದ ವಿವರವಾದ ಷರತ್ತು ಮತ್ತು ನಿಬಂಧನೆಗಳಿಗಾಗಿ ದಯಮಾಡಿ ಐಸಿಐಸಿಐ ವೆಬ್‌ಸೈಟ್‌ಗೆ **https://www.icicihfc.com/** ಭೇಟಿ ಮಾಡಿ.

ದಿನಾಂಕ : ಸೆಪ್ಟೆಂಬರ್ 15, 2022
ಸ್ಥಳ : ತುಮಕೂರು

ಅಧಿಕೃತ ಅಧಿಕಾರಿ
ಐಸಿಐಸಿಐ ಹೋಮ್ ಫೈನಾನ್ಸ್ ಕಂಪನಿ ಲಿಮಿಟೆಡ್

CAUTION - Readers are advised to make appropriate enquiries while responding to advertisements in these columns. Kannada Prabha Publications Ltd., does not vouch for any claims made by the advertisers. The Printer, Publisher, Editor and Owner of Kannada Prabha Publications Ltd., shall not be held responsible/liable for any consequences, in case such claims are found to be false. ಕನ್ನಡಪ್ರಭ

ಕೆನರಾ ಬ್ಯಾಂಕ್ Canara Bank
(ಭಾರತ ಸರ್ಕಾರದ ಒಂದು ಉದ್ಯಮ)
ಪ್ರಧಾನ ಕಛೇರಿ: ಬೆಂಗಳೂರು

ಎಆರ್‌ಎಂ ಶಾಖೆ-1,
2ನೇ ಮಹಡಿ, ನಂ.86, ಸ್ಪೆನ್ಸರ್ ಟವರ್,
ಎಂ.ಜಿ. ರಸ್ತೆ, ಬೆಂಗಳೂರು-560001.
ದೂ: 080-25310066 ಮೊ: 9883532366/9483858759
ಇ-ಮೇಲ್: cb2366@canarabank.com

ಹರಾಜು ಮಾರಾಟ ಪ್ರಕಟಣೆ

ಪ್ರೊವಿಸೊ ನಿಯಮ 8(6)ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮ 2002ರ ಸೆಕ್ಯುರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಆಕ್ಟ್ 2002ರ ಅಡಿಯಲ್ಲಿ ಸ್ಥಿರಾಸ್ತಿಗಳ ಇ-ಹರಾಜು ಮಾರಾಟ

ಸಾಮಾನ್ಯವಾಗಿ ಸಾರ್ವಜನಿಕರಿಗೆ, ಸಾಲಗಾರರು ಮತ್ತು ಜಾಮೀನುದಾರರಿಗೆ ಈ ಸೂಚನೆ ಮೂಲಕ ತಿಳಿಸುವುದೇನೆಂದರೆ [illegible] ಅಧಿಕೃತ ಅಧಿಕಾರಿ, ತುಮಕೂರು ಶಾಖೆ, (ಈಗ ARM 1 ಶಾಖೆಗೆ ವರ್ಗಾಯಿಸಲಾಗಿದೆ) ಕೆನರಾ ಬ್ಯಾಂಕ್, ಬೆಂಗಳೂರು, ರವರು ಭೌತಿಕವಾಗಿ ಸ್ವಾಧೀನಪಡಿಸಿಕೊಂಡಿರುತ್ತಾರೆ ಮತ್ತು ದಿನಾಂಕ 29.09.2022 ರಂದು (ಬೆಳಗ್ಗೆ 10.00 ರಿಂದ 10.30ರವರೆಗೆ) ಸ್ವತ್ತನ್ನು "ಎಲ್ಲಿದೆಯೊ ಹಾಗೆ", "ಏನಿದೆಯೊ ಹಾಗೆ","ಹೇಗಿದೆಯೋ ಹಾಗೆ" ಆಧಾರದಲ್ಲಿ [illegible] ಮಾರಾಟ ಮಾಡಲಾಗುವುದು. [illegible] ರೂ.137,65,18,717.61/- [illegible] ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ-1 ಬೆಂಗಳೂರು ರವರಿಂದ ಸಾಲಗಾರರಾದ: 1. ಶ್ರೀ ಸಪ್ತಗಿರಿ ಆಗ್ರೋ, [illegible] ಶ್ರೀ.ಶ್ರೀಧರ್ ಬಾಬು ಕೆ ಎಸ್ ಮತ್ತು ಶ್ರೀಮತಿ ವನಿತಾ ರಾಣಿ [illegible], ಪ್ಲಾಟ್ ನಂ.3ಡಿ & 133ಎ, I & II ಹಂತ KIADB ಕೈಗಾರಿಕಾ ಪ್ರದೇಶ ಅಂತರಸನಹಳ್ಳಿ ತುಮಕೂರು-572106, 2. ಶ್ರೀಮತಿ ವನಿತಾ ರಾಣಿ, [illegible] ಶ್ರೀಧರ್ ಬಾಬು ಕೆ ಎಸ್, ಸಪ್ತಗಿರಿ ನಿಲಯ, 4ನೇ ಕ್ರಾಸ್, ವಾಟರ್ ಟ್ಯಾಂಕ್ ಹತ್ತಿರ, ವಿದ್ಯಾನಗರ, ತುಮಕೂರು-572101. 3. ಶ್ರೀಧರ್ ಬಾಬು ಕೆ ಎಸ್ [illegible] ಶ್ರೀನಿವಾಸ್ ಶೆಟ್ಟಿ ಕೆ ಎಸ್, ಸಪ್ತಗಿರಿ ನಿಲಯ, 4ನೇ ಕ್ರಾಸ್, ವಾಟರ್ ಟ್ಯಾಂಕ್ ಹತ್ತಿರ, ವಿದ್ಯಾನಗರ, ತುಮಕೂರು-572101. ಇವರುಗಳಿಗೆ ಸಾಲವನ್ನು ನೀಡಿರುತ್ತದೆ.

ಮೀಸಲು ಬೆಲೆ ಮತ್ತು ಮುಂಗಡ ಹಣ ಠೇವಣಿ ವಿವರಗಳು ಕೆಳಗಿನಂತಿವೆ ಮತ್ತು ಅರ್ನೆಸ್ಟ್ ಮನಿ ಠೇವಣಿಯನ್ನು ದಿನಾಂಕ 28.09.2022 ರಂದು ಅಥವಾ ಅದಕ್ಕೂ ಮೊದಲು ಸಂಜೆ 5.00 ಗಂಟೆಗೆ ಖಾತೆ ಸಂಖ್ಯೆ 209272434, ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ-1, ಬೆಂಗಳೂರು RTGS/NEFT (IFSC-CNRB0002366)ಗೆ ಠೇವಣಿ ಮಾಡಲಾಗುತ್ತದೆ.

(ರೂ. ಲಕ್ಷಗಳಲ್ಲಿ)

ಲಾಟ್ ನಂ	ಸ್ಥಿರಾಸ್ತಿಗಳ ವಿವರಣೆ:	ಮೀಸಲು ಬೆಲೆ	ಇಎಂಡಿ ಮೊತ್ತ	ಬಿಡ್‌ನಲ್ಲಿ ಹೆಚ್ಚಿಸುವ ಮೌಲ್ಯ
1	ಕೈಗಾರಿಕಾ ಭೂಮಿ ಮತ್ತು ಕಟ್ಟಡವನ್ನು ಹೊಂದಿರುವ ಪ್ಲಾಟ್ ನಂ.3/ಡಿ ರಲ್ಲಿ ಸರ್ವೆ ನಂ.21 & 23, [illegible] ಗ್ರಾಮ, ವಿಸ್ತೀರ್ಣ 50.80 x (136.40+132.70)/2 ಮೀಟರ್ಸ್, ಅಂದರೆ 6784 ಮೀಟರ್ಸ್, KIADB ಕೈಗಾರಿಕಾ ಪ್ರದೇಶ 1ನೇ ಹಂತ, ಅಂತರಸನಹಳ್ಳಿ, ತುಮಕೂರು ಶ್ರೀ ಸಪ್ತಗಿರಿ ಆಗ್ರೋ ಇಂಡಸ್ಟ್ರೀಸ್ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ : ಪ್ಲಾಟ್ ನಂ.4, ಪಶ್ಚಿಮಕ್ಕೆ: KIADB 40 ಅಡಿ ರಸ್ತೆ, ಉತ್ತರಕ್ಕೆ: ಪ್ಲಾಟ್ ನಂ.133 2ನೇ ಹಂತ, ದಕ್ಷಿಣಕ್ಕೆ: ಪ್ಲಾಟ್ ನಂ.3-ಎ4 ಮತ್ತು 3-ಎ5. ಕೈಗಾರಿಕಾ ಭೂಮಿ ಮತ್ತು ಕಟ್ಟಡವನ್ನು ಹೊಂದಿರುವ ಪ್ಲಾಟ್ ನಂ.133-ಎ ರಲ್ಲಿ ಸರ್ವೆ ನಂ.63, [illegible] ಗ್ರಾಮ, ವಿಸ್ತೀರ್ಣ 6643 ಚ.ಮೀಟರ್ಸ್, KIADB ಕೈಗಾರಿಕಾ ಪ್ರದೇಶ 2ನೇ ಹಂತ, ಅಂತರಸನಹಳ್ಳಿ, ತುಮಕೂರು ಶ್ರೀ ಸಪ್ತಗಿರಿ ಆಗ್ರೋ ಇಂಡಸ್ಟ್ರೀಸ್ ಹೆಸರಿನಲ್ಲಿದೆ. ಚಕ್ಕುಬಂದಿ: ಪೂರ್ವಕ್ಕೆ : ಪ್ಲಾಟ್ ನಂ.4 ಮತ್ತು 133 ಸಿ, ಪಶ್ಚಿಮಕ್ಕೆ: KIADB ರಸ್ತೆ 13, ಉತ್ತರಕ್ಕೆ: ಪ್ಲಾಟ್ ನಂ.133ಎ ಪಿ1 ಮತ್ತು 133ಎ ನ ಭಾಗ, ದಕ್ಷಿಣಕ್ಕೆ: ಪ್ಲಾಟ್ ನಂ.3-ಡಿ.	₹. 1305.00	₹. 130.50	₹. 1.00
2	ಮೇಲಿನ ಲಾಟ್ ನಂ.1 ರಲ್ಲಿ ನೆಲೆಗೊಂಡಿರುವ ಪ್ಲಾಂಟ್ ಮತ್ತು ಯಂತ್ರೋಪಕರಣಗಳ ಹೈಪೋಥಿಕೇಶನ್	₹.2189.00	₹.218.90	₹.1.00
3	ಎರಡು RCC ಕಟ್ಟಡದ ಅಂಗಡಿಗಳನ್ನು ಒಳಗೊಂಡಿರುವ ಆಸ್ತಿಯ ಹಳೇ ಖಾತಾ ನಂ.59/116/41, ಹಾಲಿ ಖಾತಾ ನಂ. 197/59/1258, ನಿವೇಶನ ನಂ.116/44 ಕ್ಲಾಸ್, ವಿಸ್ತೀರ್ಣ ಪೂರ್ವದಿಂದ ಪಶ್ಚಿಮಕ್ಕೆ 8.50 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 14 ಮೀಟರ್‌ಗಳು, 1ನೇ ಮುಖ್ಯರಸ್ತೆ, 5ನೇ ಕ್ರಾಸ್, [illegible] ಯಾರ್ಡ್, [illegible] ವಾರ್ಡ್ ನಂ.35, ತುಮಕೂರು ಶ್ರೀಮತಿ ಕೆ.ಎಸ್.ವನಿತಾ ರಾಣಿ ರವರ ಹೆಸರಿನಲ್ಲಿದೆ ಚಕ್ಕುಬಂದಿ: ಪೂರ್ವಕ್ಕೆ : [illegible] ರವರಿಗೆ ಸೇರಿದ ನಿವೇಶನ ನಂ.115/433, ಪಶ್ಚಿಮಕ್ಕೆ: ನಿವೇಶನ ನಂ.117/45 [illegible] ರವರಿಗೆ ಸೇರಿದ್ದು, ಉತ್ತರಕ್ಕೆ: [illegible] ರವರಿಗೆ ಸೇರಿದ ನಿವೇಶನ ನಂ.163/91 ರಲ್ಲಿ ಇರುವ ಆಸ್ತಿ, ದಕ್ಷಿಣಕ್ಕೆ: ರಸ್ತೆ	₹. 32.00	₹. 3.20	₹. 1.00

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, 'ಇ-ಹರಾಜು'ಲಿಂಕ್ ಪ್ರೊವೈಡರ್ ಕೆನರಾ ಬ್ಯಾಂಕ್‌ರವರ ವೆಬ್‌ಸೈಟ್: (www.canarabank.com) ನಲ್ಲಿ ಒದಗಿಸಲಾಗಿದೆ ಅಥವಾ ಮುಖ್ಯ ಪ್ರಬಂಧಕರು, ಕೆನರಾ ಬ್ಯಾಂಕ್, ಎಆರ್‌ಎಂ ಶಾಖೆ-1 ಬೆಂಗಳೂರು ದೂರವಾಣಿ ಸಂಖ್ಯೆ 9483532366 ಯಾವುದೇ ಕೆಲಸದ ದಿನದಂದು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು.

ದಿನಾಂಕ : 12.09.2022
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ,
ಕೆನರಾ ಬ್ಯಾಂಕ್.